6 ಏನೂ ಆಗುವುದಿಲ್ಲ. ಆದರೆ, ಒಂದು ಕಾಲಮಾನದ ಸೃಜನಶೀಲತೆ ಎದುರಿಸುವ ಸವಾಲುಗಳನ್ನು ಪ್ರಾಮಾಣಿಕವಾಗಿ ಗ್ರಹಿಸುವ ಬರಹಗಳು ಬೇಕಾಗುತ್ತವೆ. ಯಾವುದೇ ಬರಹ ಸಾಮೂಹಿಕ ಕೆಲಸ ಮತ್ತು ಜವಾಬ್ದಾರಿಯಿಂದಲೇ ಕೂಡಿರುತ್ತದೆ. ಇದಕ್ಕೆ ವಿಮರ್ಶೆಯೂ ಹೊರತಲ್ಲ. ನನಗೆ ತಿಳಿದ ಮಟ್ಟಿಗೆ ಇಂದು ಸೃಜನಶೀಲ ಬರಹಗಳ ಮಟ್ಟದಲ್ಲಿ ವಿಮರ್ಶೆ ಮತ್ತು ಸಂಶೋಧನೆಗಳ ಬರಹಗಳು ಪ್ರಕಟವಾಗುತ್ತಿಲ್ಲ. ಹೊಸತಲೆಮಾರಿನ ಸಂಶೋಧನೆಯಂತೂ ಬಹಳಷ್ಟು ಬಡವಾಗಿದೆ. ಆಗಲೇ ಹೇಳಿದ ಹಾಗೆ ಹೊಸತಲೆಮಾರಿನ ಕೆಲವು ವಿದ್ಯಾರ್ಥಿಗಳು ಸಾಕಷ್ಟು ಗಂಭೀರವಾಗಿದ್ದಾರೆ. ಆದರೆ ನಡೆಯಬೇಕಾದ ಕೆಲಸಗಳ ಬಗ್ಗೆ ಸರಿಯಾದ ಅರಿವಿಲ್ಲ. ನಿದರ್ಶನಕ್ಕೆ ಹೊಸದಾಗಿ ಸಂಶೋಧನೆ ಮಾಡುವ ವಿದ್ಯಾರ್ಥಿಗಳು ಹಿಂದಿನ ಕವಿಗಳ ಸಾಹಿತ್ಯವನ್ನು ತಾತ್ವಿಕವಾಗಿ ಅಧ್ಯಯನ ಮಾಡುವುದರ ಜೊತೆಗೆ ಹೊಸಬರ ಸಾಹಿತ್ಯವನ್ನು ಇಂದಿನ ತಾತ್ವಿಕ ಚೌಕಟ್ಟಿನೊಳಗೆ ಅಧ್ಯಯನ ಮಾಡುವ ಅವಕಾಶಗಳಿವೆ. ಇದರ ಜೊತೆಗೆ ಬೆಂಗಳೂರು ವಿಶ್ವವಿದ್ಯಾಲಯ ಹೊರತರುತ್ತಿದ್ದ 'ಸಾಧನೆ'ಯಂತ ಪತ್ರಿಕೆಗಳು ಮತ್ತು ಸುಮಾರು ಮೂವತ್ತು ವರ್ಷ ಹೊಸತಲೆಮಾರಿನ ಬರಹಗಳಿಗೆ ಸ್ಪಂದಿಸುತ್ತಿದ್ದ 'ಸಂಚಯ'ದಂತಹ ಸಾಹಿತ್ಯಪತ್ರಿಕೆಗಳು ಇಂದು ಕಾಣೆಯಾಗಿರುವುದು. ಇದರ ನಡುವೆಯೂ ನಮ್ಮ ದಿನ ಪತ್ರಿಕೆಗಳು ಹೊಸತಲೆಮಾರಿಗೆ ಅವಕಾಶಗಳು ಕಲ್ಪಿಸಿಕೊಟ್ಟಿವೆ. ಬಹುಮಾನಿತ ಕವಿತೆ, ಕತೆಗಳ ಹಿಂದೆ ವಿಮರ್ಶೆಯ ನ್ಯಾಯ ಇರುವುದಿಲ್ಲವೇ? ಪುಸ್ತಕ ಪರಿಚಯಗಳು ವಿಮರ್ಶೆಯಲ್ಲವೇ? ಇವುಗಳಿಂದ ಹಿಂದೆ ರಾಜಕೀಯವನ್ನು ಪದೇ ಪದೇ ಹುಡುಕುವುದು ಸರಿಯಲ್ಲವೇನೋ. ಬಹುಮಾನಿತ ಕತೆ, ಕವಿತೆಗಳು ಮಾತ್ರ ಶ್ರೇಷ್ಠವೆಂದು ನಾವೇಕೆ ಭಾವಿಸಬೇಕು. ಇಷ್ಟರ ನಡುವೆಯೂ ಆಪ್ತ ಗೆಳೆಯರ ಗುಂಪುಗಳು ರಾಜ್ಯದ ಅನೇಕ ಕಡೆ ಒಳ್ಳೆಯ ಕವಿತೆಯ ಕುರಿತು, ಗಮನಿಸಬೇಕಾದ ಕೃತಿಗಳ ಬಗ್ಗೆ ಚರ್ಚೆಗಳನ್ನು ನಡೆಸುತ್ತಲೇ ಇದ್ದಾರೆ. ಇವುಗಳಲ್ಲಿಯು ವಿಮರ್ಶೆ ಇದ್ದೇ ಇರುತ್ತದೆ.

7 ಈ ಪ್ರಶ್ನೆಗೆ ಶಾಸ್ತ್ರೀಯವಾಗಿ ಕಾವ್ಯಮೀಮಾಂಸೆಯಲ್ಲಿ ಹಲವು ಉತ್ತರರೂಪದ ವಾದಗಳನ್ನು ಗಮನಿಸಬಹುದು. ಆದರೆ 'ಇಂದು' ಹೇಗೆ ಅರ್ಥೈಸಿಕೊಳ್ಳಬೇಕು ಎಂಬ ಒತ್ತಡವೂ ಇದೆ. ಸೃಜನಶೀಲ ಬರಹಗಾರ ಏಕಕಾಲದಲ್ಲಿ ಅಂತರಂಗ ಮತ್ತು ಸಮಾಜವನ್ನು ಗಮನದಲ್ಲಿಟ್ಟುಕೊಳ್ಳಬಲ್ಲ. ಸಾಮಾನ್ಯವಾಗಿ ಎಲ್ಲ ಬರಹಗಾರರು ತಮ್ಮ ಬರಹಗಳು ಓದುಗನಿಗೆ ತಲುಪಬೇಕೆಂಬ ಬಯಕೆ ಇದ್ದೇ ಇರುತ್ತದೆ. ನಾನೂ ಓದುಗರಿಗಾಗಿಯೇ ಬರೆಯುತ್ತ ಬಂದಿದ್ದೇನೆ.

## ಸುರೇಶ ನಾಗಲಮಡಿಕೆ

ಹೊಸತಲೆಮಾರಿನ ಬರಹಗಾರ. 'ಮುತ್ತು ಬಂದಿದೆ ಕೇರಿಗೆ', 'ತಕ್ಕಮಣ್ಣಿನ ತೇವಕ್ಕಾಗಿ', 'ಕಾಣ್ಕೆಕಣ್ಕಟ್ಟು', 'ಬಯಲಾಗುವ ಪರಿ' ಹೊಸತಲೆಮಾರಿನ ಕಾವ್ಯ ಕುರಿತ 'ಹಲವು ಬಣ್ಣದ ಹಗ್ಗ', ಕೆ.ಎಸ್.ನ ಕಾವ್ಯ ಕುರಿತ 'ಉಳಿದದ್ದು ಆಕಾಶ' ಮುಂತಾದ ಕೃತಿಗಳ ಪ್ರಕಟಣೆ. ಸದ್ಯ ಬೆಂಗಳೂರಿನ ವಿವೇಕಾನಂದ ಪದವಿ ಕಾಲೇಜಿನಲ್ಲಿ ಕನ್ನಡ ಅಧ್ಯಾಪಕ.